19.	ತುಮಕೂರು	1440.29	352.23	98.123
20.	ಉತ್ತರ ಕನ್ನಡ	481.02	116.27	38.800
	ರಾಜ್ಯ ಕೋಶ	10.00	10.00	2.390
	ಒಟ್ಟು	21094.44	5171.49	1947.927

ಪಶ್ಚಿಮ ಘಟ್ಟ ಯೋಜನೆಯಲ್ಲಿ ಬರುವ ತಾಲ್ಲೂಕುಗಳು

1768 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ಬರುವ ತಾಲ್ಲೂಕುಗಳು ಯಾವುವು.*

ಆ) *ಈ ಮಂಡಳಿಗೆ 1992-93, 1993-94, 94-95ರಲ್ಲಿ ನಿಗದಿಗೊಳಿಸಿದ, ಬಿಡುಗಡೆ ಮಾಡಿದ, ವೆಚ್ಚ ಮಾಡಿದ ಹಾಗೂ ವೆಚ್ಚ ಮಾಡದೆ ಉಳಿಸಿದ ಹಣವೆಷ್ಟು.*

ಇ) *1995.96ನೇ ಸಾಲಿನಲ್ಲಿ ಈ ಯೋಜನೆಗೆ ನಿಗದಿಮಾಡಿದ ಹಣವೆಷ್ಟು ಹಾಗೂ 1-4-95ರಿಂದ 30-6-95ರವರೆಗೆ ಬಿಡುಗಡೆಯಾದ ಹಾಗೂ ವೆಚ್ಚವಾದ ಹಣವೆಷ್ಟು?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ತಾಲ್ಲೂಕುಗಳ ಪಟ್ಟಿಯನ್ನು ಲಗತ್ತಿಸಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಇ) ಈ ಯೋಜನೆಗೆ 1995-96ನೇ ಸಾಲಿನಲ್ಲಿ ನಿಗದಿಪಡಿಸಲಾದ ಪೂರ್ಣ ರೂ. 1122.00 ಲಕ್ಷಗಳು. 1-4-95ರಿಂದ 30-6-95ರವರೆಗೆ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. 1995-96ನೇ ಆರಂಭಿಕ ಶಿಲ್ಕಿನ ಹಣದಲ್ಲಿ ರೂ. 25.09 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಕಾರ್ಯಾಚರಣೆಯಲ್ಲಿರುವ ಪ್ರದೇಶಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕುಗಳ ಹೆಸರು	
1.	ಬೆಳಗಾಂ	1.	ಖಾನಾಪುರ
		2.	ಹುಕ್ಕೇರಿ
		3.	ಬೆಳಗಾಂ
		4.	ಬೈಲಹೊಂಗಲ
		5.	ಸೌಂದತ್ತಿ
2.	ಚಿಕ್ಕಮಗಳೂರು	6.	ಕೊಪ್ಪ
		7.	ಮೂಡಿಗೆರೆ
		8.	ಶೃಂಗೇರಿ
		9.	ಚಿಕ್ಕಮಗಳೂರು

		10.	ನರಸಿಂಹರಾಜಪುರ
3.	ಕೂಡಗು	11.	ಮಡಿಕೇರಿ
		12.	ಸೋಮವಾರಪೇಟೆ
		13.	ವೀರಾಜಪೇಟೆ
4.	ಹಾಸನ	14.	ಸಕಲೇಶಪುರ
		15.	ಆಲೂರು
		16.	ಬೇಲೂರು
		17.	ಹಾಸನ
5.	ಮೈಸೂರು	18.	ಹೆಚ್.ಡಿ. ಕೋಟ
		19.	ಗುಂಡ್ಲುಪೇಟೆ
6.	ಉತ್ತರ ಕನ್ನಡ	20.	ಅಂಕೋಲಾ
		21.	ಭಟ್ಕಳ್
		22.	ಹೊನ್ನಾವರ
		23.	ಕುಮಾಟಾ
		24.	ಕಾರವಾರ
		25.	ಸಿದ್ಧಾಪುರ
		26.	ಸಿರಸಿ
		27.	ಸೂಪ
		28.	ಯಲ್ಲಾಪುರ
7.	ದಕ್ಷಿಣ ಕನ್ನಡ	29.	ಬೆಳ್ತಂಗಡಿ
		30.	ಕುಂದಾಪುರ
		31.	ಕಾರ್ಕಳ
		32.	ಪುತ್ತೂರು
		33.	ಸೂಳ್ಯ
		34.	ಉಡುಪಿ
8.	ಶಿವಮೊಗ್ಗ	35.	ಹೊಸನಗರ
		36.	ತೀರ್ಥಹಳ್ಳಿ
		37.	ಸಾಗರ
		38.	ಶಿವಮೊಗ್ಗ
		39.	ಶಿಕಾರಿಪುರ
9.	ಧಾರವಾಡ	40.	ಧಾರವಾಡ

ಅನುಬಂಧ

ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ 1992-93, 1993-94 ಮತ್ತು 1994-95ನೇ ಸಾಲುಗಳಲ್ಲಿ ನಿಗದಿಪಡಿಸಿದ ಹಣ, ಬಿಡುಗಡೆ ಮಾಡಿದ ಹಣ, ವೆಚ್ಚ ಮಾಡಿದ ಹಣ ಹಾಗೂ ವೆಚ್ಚ ಮಾಡದೆ ಉಳಿದ ಹಣದ ವಿವರಗಳನ್ನೊಳಗೊಂಡ ತಃಖ್ತೆ.

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ವರ್ಷ	ನಿಗದಿ ಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ ಮಾಡಿದ ಹಣ	ಖರ್ಚಾಗದೇ ಉಳಿದ ಹಣ
1.	1992-93	955.640	955.640	946.764	8.876
2.	1993-94	1024.000	1045.124	939.741	84.259
3.	1994-95	1028.750	944.491	955.812	72.938

ಸರ್ವಜ್ಞ ಜನ್ಮಸ್ಥಳ ಅಬಲೂರಿನಲ್ಲಿ ತೆಗೆದುಕೊಂಡ ಕಾರ್ಯಕ್ರಮ.

1730 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕಿನಲ್ಲಿರುವ ಸರ್ವಜ್ಞನ ಜನ್ಮ ಸ್ಥಳ ಅಬಲೂರಿನಲ್ಲಿ ಹಾಕಿಕೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳಾವುವು ಹಾಗೂ ಅವುಗಳನ್ನು ಯಾವಾಗ ಹಾಕಿಕೊಳ್ಳಲಾಗಿದೆ.

ಆ) ಆ ಎಲ್ಲಾ ಕಾರ್ಯಗಳ ಪ್ರಗತಿ 31-7-95ಕ್ಕೆ ಯಾವ ಹಂತದಲ್ಲಿದೆ.

ಇ) ಹಾಗೂ ಪ್ರತಿ ಯೋಜನೆಗಳನ್ನು ಎಂದು ಮುಗಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ)1 ಸರ್ವಜ್ಞನ ಮಂಟಪಕ್ಕೆ ಆವರಣ ಗೋಡೆ ನಿರ್ಮಿಸುವುದು, ಪ್ರವಾಸಿ ಮಂದಿರ ಕಟ್ಟುವುದು, ಸರ್ವಜ್ಞ ಸ್ಮಾರಕ ಭವನ ನಿರ್ಮಾಣ ಇವುಗಳನ್ನು 94-95ನೇ ಸಾಲಿನಲ್ಲಿ ಹಾಕಿಕೊಳ್ಳಲಾಗಿದೆ.

2) ಒಂದು ಕೊಳವೆ ಬಾವಿಯನ್ನು ಕೇಂದ್ರ ವಲಯ ವಿಶೇಷ ಘಟಕ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ.
1995-96ನೇ ಸಾಲಿನಲ್ಲಿ ಹಾಕಿಕೊಳ್ಳಲಾಗಿದೆ.

3) ಒಂದು ಅಂಗನವಾಡಿ ಕಟ್ಟಡ ನಿರ್ಮಾಣವನ್ನು ಉದ್ಯೋಗ ಭರವಸೆ ಯೋಜನೆಯಡಿ ತೆಗೆದುಕೊಳ್ಳಲಾಗಿದೆ.
1994-95ನೇ ಸಾಲಿನ ಹಾಕಿಕೊಳ್ಳಲಾಗಿದೆ.

4) ಜೆಆರ್‌ವೈ 80 ಶೇ. ಅಡಿಯಲ್ಲಿ :

1) ಅಬಲೂರು ಗ್ರಾಮದಲ್ಲಿ ಶಾಲಾ ರಿಪೇರಿ ಹಾಗೂ ಕಾಂಪೌಂಡ್ ದುರಸ್ಥಿ

2) ಎಸ್‌ಸಿ :ಎಸ್‌ಟಿ. ಮನೆ ನಿರ್ಮಾಣ

3) ಪಕ್ಕಾ ಗಟಾರ ಹಾಗೂ ರಸ್ತೆ ಸುಧಾರಣೆ 1995-96ನೇ ಸಾಲಿಗೆ ಹಾಕಿಕೊಳ್ಳಲಾಗಿದೆ.